ಕ್ರ. ಸಂ.	ಹೆಸರು ಶ್ರೀಯುತರು	ವಿದ್ಯಾರ್ಹತೆ	ಜಾತಿ
1.	ಎಸ್. ಮುನಿರಾಯ ಅಧ್ಯಕ್ಷರು	ಬಿ.ಎಸ್.ಸಿ. ಎಲ್.ಎಲ್.ಬಿ	ರಾಜು ಕ್ಷತ್ರಿಯ
2.	ಪ್ರಭಾಕರ್ ಆರ್. ತೇಲ್ಕರ್, ಸದಸ್ಯರು	ಬಿ.ಎ., ಎಲ್.ಎಲ್.ಬಿ.	ಭಾವಸಾರ ಕ್ಷತ್ರಿಯ
3.	ಡಾ: ಬಿ.ಕೆ. ರವಿ, ಸದಸ್ಯರು (ಸಮಾಜ ವಿಜ್ಞಾನಿ)	ಎಂ.ಎ., ಎಂ.ಎಸ್.ಸಿ	ಕುರುಬ
4.	ಎಸ್. ಸಿದ್ದಗಂಗಯ್ಯ, ಸದಸ್ಯರು	ಬಿಕಾಂ, ಎಲ್.ಎಲ್.ಬಿ. ಕೆ.ಎ.ಎಸ್. (ನಿವೃತ್ತಿ)	ತಿಗಳ
5.	ಯು.ಭೂಪತಿ, ಸದಸ್ಯರು	ಬಿ.ಎಸ್.ಸಿ	ಉಪ್ಪಾರ
6.	ಎಸ್.ವಿ. ಅಮೀನ್, ಸದಸ್ಯರು	ಬಿಕಾಂ. ಎಲ್.ಎಲ್.ಬಿ	ಬಿಲ್ಲವ

ಆ) ಹಿಂದುಳಿದ ವರ್ಗಗಳ ಆಯೋಗದ 1995ರ ಕಾಯಿದೆಯ ಅಧಿನಿಯಮ 3ರ ನಿಯಮಗಳಲ್ಲಿ ಆಯೋಗದ ಸದಸ್ಯರ ಆಯ್ಕೆಗೆ ಮಾನದಂಡ ನಿಗಧಿಪಡಿಸಲಾಗಿದೆ. ಹಿಂದುಳಿದ ವರ್ಗಗಳ ವಿಷಯದಲ್ಲಿ ವಿಶೇಷ ಜ್ಞಾನವುಳ್ಳ 5 ಜನ ಸದಸ್ಯರು, ಅವರುಗಳಲ್ಲಿ ಒಬ್ಬರು ಸಮಾಜ ವಿಜ್ಞಾನಿಯಾಗಿರಬೇಕು

ಇ) ಒಟ್ಟು 220 ಜಾತಿಗಳಿಗೆ ಸಂಬಂಧಿಸಿದಂತೆ 310 ಅರ್ಜಿಗಳು ಇತ್ಯರ್ಥಕ್ಕಾಗಿ ಆಯೋಗದ ಮುಂದಿವೆ.

ಈ) ಪರ್ಯಾಯ ಪದಗಳ ಸೇರ್ಪಡೆಗೆ ಕೋರಿ ಬಂದ 25 ಪ್ರಕರಣಗಳ ಬಗ್ಗೆ ಆಯೋಗವು ತೀರ್ಮಾನ ಕೈಗೊಂಡಿದೆ. ಆದರೆ ಈ ಬಗ್ಗೆ ಆಯೋಗದಿಂದ ಸರ್ಕಾರಕ್ಕೆ ವರದಿ ಬಂದಿರುವುದಿಲ್ಲ.

ಉ) ಆಯೋಗದ ಅಧ್ಯಕ್ಷರು ಸದಸ್ಯರು 5 ವರ್ಷಗಳ ಅವಧಿಗೆ ನೇಮಕವಾಗಿರುತ್ತಾರೆ. ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಹೆಸರು ಶ್ರೀಯುತ	ಅಧಿಕಾರಾವಧಿ ಮುಗಿಯುವ ದಿನಾಂಕ
1.	ಎಸ್. ಮುನಿರಾಜು, ಅಧ್ಯಕ್ಷರು	20.05.2004
2.	ಪ್ರಭಾಕರ್ ಆರ್. ತೇಲ್ಕರ್, ಸದಸ್ಯರು	14.03.2005
3.	ಡಾ: ಬಿ.ಕೆ. ರವಿ, ಸದಸ್ಯರು	10.03.2005
4.	ಎಸ್. ಸಿದ್ದಗಂಗಯ್ಯ, ಸದಸ್ಯರು	17.05.2005
5.	ಯು.ಭೂಪತಿ, ಸದಸ್ಯರು	17.05.2005
6.	ಎಸ್.ವಿ. ಅಮೀನ್, ಸದಸ್ಯರು	17.05.2005

ರಾಜ್ಯದಲ್ಲಿ ಹೊಸಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮಾಡಿರುವ ಬಗ್ಗೆ

4205 (4929) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಜಾತಿಜನಾಂಗಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಲಾಗಿದೆ: (ಜಾತಿವಾರು/ಜಿಲ್ಲಾವಾರು ವಿವರವಾದ ಮಾಹಿತಿ ನೀಡುವುದು)

ಆ) ಇಂತಹ ಹಿಂದುಳಿದ ಜಾತಿಗಳ ಕಡು ಬಡವರ ಉನ್ನತಿಗೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ಮೇಲೆತ್ತುವ ಸಲುವಾಗಿ ಹಮ್ಮಿಕೊಂಡಿರುವ ವಿವಿಧ ಕಾರ್ಯ ಯೋಜನೆಗಳಾವುವು;

ಇ) ಈ ನಿಟ್ಟಿನಲ್ಲಿ ಈ ವರ್ಗಗಳ ಸ್ಥಿತಿ-ಗತಿಯ ಮಾಹಿತಿಗಾಗಿ ಸಮೀಕ್ಷಾ ಕಾರ್ಯ (ಜಾತಿವಾರು ಜನಗಣತಿ) ಮಾಡಲು ಸರ್ಕಾರ ನಿರ್ಧರಿಸಿದೆಯೇ;

ಈ) ಇದಕ್ಕಾಗಿ ನಿಗದಿಪಡಿಸಿರುವ ಹಣ ಎಷ್ಟು; ಯಾವಾಗ ಕಾರ್ಯಯೋಜನೆ ಹಮ್ಮಿಕೊಳ್ಳಲಾಗುವುದು; ಹಾಲಿ ಇರುವ ಆಯೋಗವೇ ಇದರ ಜವಾಬ್ದಾರಿ ನಿರ್ವಹಿಸುವುದೇ; (ವಿವರ ನೀಡುವುದು)

ಉ) ಇದರ ಅನುಷ್ಠಾನಕ್ಕಾಗಿ ಪತ್ಯೇಕ ನಿರ್ದೇಶನಾಲಯ ಸ್ಥಾಪಿಸಿ ಹೊಣೆವಹಿಸಲು ಉದ್ದೇಶಿಸಲಾಗಿದೆಯೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸರ್ಕಾರದ ದಿನಾಂಕ: 30.3.2002ರ ಆದೇಶದಲ್ಲಿ ಉಪಜಾತಿಗಳೂ ಸೇರಿದಂತೆ 799 ಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಿ ದಿನಾಂಕ: 30.03.2002 ರಂದು ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಜಾತಿವಾರು ಮತ್ತು ಜಿಲ್ಲಾವಾರು ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ.

ಆ) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಹಿಂದುಳಿದ ವರ್ಗಗಳ ಇಲಾಖೆಯ ಮೂಲಕ ಹಲವಾರು ಆರ್ಥಿಕ ಮತ್ತು ಶೈಕ್ಷಣಿಕ ಯೋಜನೆಗಳನ್ನು ಹಿಂದುಳಿದ ವರ್ಗದವರ ಅಭಿವೃದ್ಧಿಗಾಗಿ ಜಾರಿಗೊಳಿಸಲಾಗುತ್ತಿದೆ. ವಿವರಗಳನ್ನು ಅನುಬಂಧ Iರಲ್ಲಿ ಲಗತ್ತಿಸಿದೆ.

ಇ) ಹಿಂದುಳಿದ ವರ್ಗಗಳ ಸ್ಥಿತಿಗತಿಯ ಬಗ್ಗೆ ಸಮಗ್ರ ಸಮೀಕ್ಷೆಯಾಗದಿರುವುದು ಸರ್ಕಾರದ ತಿಳುವಳಿಕೆಯಲ್ಲಿದ್ದು ಅದರ ಅಗತ್ಯವನ್ನು ಸರ್ಕಾರವು ಮನಗಂಡಿದೆ. ಸದರಿ ಸಮೀಕ್ಷೆಗೆ ಆಗಲಿರುವ ವೆಚ್ಚವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಇದಕ್ಕಾಗಿ ಯಾವುದೇ ಅನುದಾನ ಮಂಜೂರಾಗಿರುವುದಿಲ್ಲ. ಆಯೋಗವು 15 ಕೋಟಿ ರೂ.ಗಳ ಅನುದಾನಕ್ಕಾಗಿ ಕೋರಿಕೆ ಸಲ್ಲಿಸಿರುತ್ತದೆ.

ಉ) ಈ ವಿಷಯದ ಬಗ್ಗೆ ಯಾವುದೇ ತೀರ್ಮಾನವನ್ನು ತೆಗೆದುಕೊಂಡಿಲ್ಲ.

ಅನುಬಂಧ

ಪ್ರಶ್ನೆ ಸಂಖ್ಯೆ: 4929ಕ್ಕೆ ಅನುಬಂಧ

1. ಹಿಂದುಳಿದ ವರ್ಗಗಳ ಇಲಾಖೆಯಿಂದ ಜಾರಿಗೊಳಿಸುತ್ತಿರುವ ಯೋಜನೆಗಳು

1. ಮೆಟ್ರಿಕ್-ಪೂರ್ವ ಹಾಗು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ.
2. ಮೆಟ್ರಿಕ್-ಪೂರ್ವ ಹಾಗೂ ಮೆಟ್ರಿಕ್-ನಂತರದ ಖಾಸಗೀ ವಿದ್ಯಾರ್ಥಿನಿಲಯಗಳಿಗೆ ಭೋಜನ ವೆಚ್ಚದ ಅನುದಾನ ನೀಡಿಕೆ ಹಾಗೂ ಅನಾಥಾಲಯಗಳಿಗೆ ಭೋಜನ ವೆಚ್ಚ ನೀಡಿಕೆ.

3. ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ
4. ಆಶ್ರಮ ಶಾಲೆಗಳ ನಿರ್ವಹಣೆ
5. ಮೆಟ್ರಿಕ್–ಪೂರ್ವ ಮತ್ತು ಮೆಟ್ರಿಕ್–ನಂತರ ವಿದ್ಯಾರ್ಥಿವೇತನಗಳ ವಿತರಣೆ
6. ಹೆಚ್ಚುವರಿ ಭೋಜನ ವೆಚ್ಚ ಪಾವತಿ.
7. ಶುಲ್ಕ ವಿನಾಯಿತಿ ಕಾರ್ಯಕ್ರಮ
8. ಬೆಳ್ಳಬೆಳಕು ಕಾರ್ಯಕ್ರಮ
9. ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ.
10. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ.
11. ಕಾನೂನು ಪದವೀಧರರಿಗೆ ತರಬೇತಿ.
12. ಮೊರಾರ್ಜಿ ದೇಸಾಯಿ ವಸತಿಶಾಲೆಗಳ ನಿರ್ವಹಣೆ

2. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ.

1. ಚೈತನ್ಯ ಮಾರ್ಜಿನ್ ಹಣದ ಯೋಜನೆ (ಸ್ವಯಂ ಉದ್ಯೋಗಕ್ಕಾಗಿ)
2. ವಾಹನ ಚಾಲನಾ ತರಬೇತಿ ಕಾರ್ಯಕ್ರಮ
3. ನೇರ ಸಾಲ ಯೋಜನೆ
4. ಅರಿವು ಕಾರ್ಯಕ್ರಮ
5. ಫೋರ್‌ಮನ್‌ಷಿಪ್ ಇಲಾಖೆ ಕಾರ್ಯಕ್ರಮ

ಮೇಲ್ಕಂಡ ಕಾರ್ಯಕ್ರಮಗಳ ಜಾರಿಗಾಗಿ 2003–04ನೇ ಸಾಲಿನಲ್ಲಿ ಕ್ರಮವಾಗಿ ರೂ. 11699.35 ಲಕ್ಷಗಳು ಮತ್ತು ರೂ. 1361 ಲಕ್ಷಗಳು ಒದಗಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಡಲ ಕೊರೆತದ ಸಮಸ್ಯೆ

4206 (4786) : ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) ಮಾನ್ಯ ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಕಡಲ ಕೊರತೆ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಕಡಲ ಕೊರೆತ ಸಮಸ್ಯೆಯನ್ನು ಫ್ರೆಂಚ್ ತಂತ್ರಜ್ಞಾನದ ನೆರವಿನಿಂದ ಬಗೆಹರಿಸಲಾಗುವುದೇ? ಫ್ರೆಂಚ್ ತಂತ್ರಜ್ಞಾನದ ವೈಶಿಷ್ಟ್ಯಗಳೇನು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು)

ಅ) ಮಳೆಗಾಲದಲ್ಲಿ ತೀವ್ರ ಸಮುದ್ರ ಕೊರೆತ ಸಂಭವಿಸುತ್ತಿರುವ ಪ್ರದೇಶಗಳಲ್ಲಿ ತುರ್ತು ರಕ್ಷಣೆಗೆ ತಾತ್ಕಾಲಿಕ ತಡೆಗೋಡೆಗಳನ್ನು ನಿರ್ಮಿಸಲಾಗುತ್ತಿದೆ.

ಕಡಲ ಕೊರೆತವನ್ನು ತಪ್ಪಿಸಲು ಸೆಂಟ್ರಲ್ ವಾಟರ್ ಮತ್ತು ಪವರ್ ರೀಸರ್ಚ್ ಸ್ಟೇಷನ್, ಪುಣೆ ಹಾಗೂ ಕರ್ನಾಟಕ ಇಂಜಿನಿಯರಿಂಗ್ ರೀಸರ್ಚ್ ಸ್ಟೇಷನ್, ಮೈಸೂರು ಇವರು ನೀಡಿದ ಸಲಹೆ ಹಾಗೂ ವಿನ್ಯಾಸದಂತೆ ತೀವ್ರ ಸಮುದ್ರ ಕೊರತೆ ಸಂಭವಿಸುತ್ತಿರುವ ಪ್ರದೇಶಗಳಲ್ಲಿ ಶಾಶ್ವತ ತಡೆಗೋಡೆ ನಿರ್ಮಿಸಲಾಗುತ್ತಿದೆ. ಈವರೆಗೆ ರಾಜ್ಯದ ಕರಾವಳಿ ತೀರದ ವಿವಿಧ ಪ್ರದೇಶಗಳಲ್ಲಿ ಒಟ್ಟು 48.26 ಕಿ.ಮೀ. ಉದ್ದಕ್ಕೆ ಶಾಶ್ವತ ತಡೆಗೋಡೆಯನ್ನು ರೂ. 57.20 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ.